**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 719 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ.ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಸರ್ಕಾರ ಕಲಬುರಗಿ ನಗರದಲ್ಲಿ ಹೊರ ವರ್ತುಲ ರಸ್ತೆ ನಿರ್ಮಿಸಲು ಕೈಗೊಂಡಿರುವ ಕ್ರಮಗಳೇನು; | ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕಲಬುರಗಿ ನಗರದಲ್ಲಿ ಬೈಪಾಸ್ (ಹೊರವರ್ತುಲ ರಸ್ತೆ) ನಿರ್ಮಿಸಲು ಕಾರ್ಯಸಾಧ್ಯತೆ ಮತ್ತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ರೂ.103.98 ಲಕ್ಷಗಳಿಗೆ ಕೇಂದ್ರ ಭೂಸಾರಿಗೆ ಮಂತ್ರಾಲಯ, ನವದೆಹಲಿ ರವರಿಂದ ದಿನಾಂಕ:09.09.2015 ರಂದು ಮಂಜೂರಾತಿ ದೊರೆತಿರುತ್ತದೆ. ಅದರಂತೆ ಕಾರ್ಯಸಾಧ್ಯತೆ ಮತ್ತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಟ್ರಾನ್‌ಸಿಸ್ ಕನ್ಸಲ್‌ಟೆಂಟ್ ಪ್ರೈ.ಲಿ. ಬೆಂಗಳೂರು ರವರಿಗೆ ದಿನಾಂಕ:09.11.2015 ರಂದು ಗುತ್ತಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.<br><br>ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ದಿನಾಂಕ: 14.02.2017 ರಂದು ಬೈಪಾಸ್ ನಿರ್ಮಾಣಕ್ಕಾಗಿ ರೇಖಾ ನಕ್ಷೆಗೆ ಅನುಮೋದನೆ ನೀಡಿರುತ್ತಾರೆ. ನಂತರದಲ್ಲಿ ರೂ.1421.21 ಕೋಟಿಗಳಿಗೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಮಂಜೂರಾತಿಗಾಗಿ ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ದಿನಾಂಕ: 17.09.2018 ರಂದು ಸಲ್ಲಿಸಲಾಗಿರುತ್ತದೆ. ಆದರೆ, ಸದರಿ ಕಾಮಗಾರಿಯು ವಾರ್ಷಿಕ ಕ್ರಿಯಾ ಯೋಜನೆ ಪಟ್ಟಿಯಲ್ಲಿ ಅನುಮೋದನೆಯಾಗಿಲ್ಲದ ಕಾರಣ ಪ್ರಸ್ತಾವನೆಯನ್ನು ದಿನಾಂಕ:26.10.2018 ರಂದು ಹಿಂದಿರುಗಿಸಿರುತ್ತಾರೆ. |
| ಆ) | ಕಲಬುರಗಿ ನಗರದಲ್ಲಿ ಹೊರ ವರ್ತುಲ ರಸ್ತೆ ನಿರ್ಮಿಸಲು ಎಷ್ಟು ಮೊತ್ತದ ಡಿ.ಪಿ.ಆರ್. ನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ; (ವಿವರ ನೀಡುವುದು) | |
| ಇ) | ಸರ್ಕಾರದಿಂದ ಇದುವರೆವಿಗೂ ಹೊರ ವರ್ತುಲ ರಸ್ತೆ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; (ವಿವರ ನೀಡುವುದು) | ಪ್ರಸ್ತುತ ಬೈಪಾಸ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಯನ್ನು ಕೇಂದ್ರ ಭೂಸಾರಿಗೆ ಮಂತ್ರಾಲಯಕ್ಕೆ ಅನುಮೋದನೆಗಾಗಿ ದಿನಾಂಕ:22.08.2022 ರಂದು ಸಲ್ಲಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ. ಹಾಗೂ ಅನುಮೋದನೆ ದೊರೆತ ಕೂಡಲೇ ಬೈಪಾಸ್ ನಿರ್ಮಾಣ ಕಾಮಗಾರಿಯನ್ನು ಕೈಗೊಂಡು ಸಾರ್ವಜನಿಕರ ಸೇವೆಗೆ ಲಭ್ಯ ಮಾಡಲಾಗುವುದು. |
| ಈ) | ಪ್ರಸ್ತುತ ಶೇಕಡ ಎಷ್ಟು ಪ್ರಮಾಣದ ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ; (ವಿವರ ನೀಡುವುದು) | |
| ಉ) | ಹೊರ ವರ್ತುಲ ರಸ್ತೆಯು ಸಾರ್ವಜನಿಕರ ಸೇವೆಗೆ ಲಭ್ಯವಾಗುವುದು ಯಾವಾಗ? (ವಿವರ ನೀಡುವುದು) | |

ಕಡತ ಸಂಖ್ಯೆ: ಲೋಇ 54 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು